ನಿಯಮ 334ರ ಮೇರೆಗೆ

3) ಬಂಟ್ವಾಳ ತಾಲ್ಲೂಕು ಕೇಂದ್ರದಲ್ಲಿ ಸರ್ಕಾರಿ ಬಸ್ ನಿಲ್ದಾಣದ ನಿರ್ಮಾಣದ ಬಗ್ಗೆ

ಶ್ರೀ ರಮಾನಾಥ ರೈ.—ಮಾನ್ಯ ಅಧ್ಯಕ್ಷರೇ, ಬಂಟವಾಳ ತಾಲ್ಲೂಕು ಕೇಂದ್ರ ಬಿ. ಸಿ. ರೋಡಿನಲ್ಲಿ ಸರಕಾರಿ ಬಸ್ಸು ನಿಲ್ದಾಣದ ನಿರ್ಮಾಣದ ಬಗ್ಗೆ ಸರಕಾರದಿಂದ ಹಲವಾರು ಬಾರಿ ಬಾಯಿ ಮಾತಿನ ಭರವಸೆಗಳು ದೊರೆತಿಂ ಬಂಟ್ವಾಳದ ಜನರು ಸಂತೋಷ ಪಟ್ಟಿದ್ದಾರೆ. ಈ ಭರವಸೆಗಳು ಭರವಸೆಗಳಾಗಿಯೇ ಉಳಿದು ಜನರ ಆಸೆಯು ಕಮರಿ ಹೋಗಿದೆ ಬಿ. ಸಿ. ರೋಡಿನಲ್ಲಿ ಸರಕಾರಿ ಬಸ್ಸು ನಿಲ್ದಾಣದ ಅಗತ್ಯ ತುಂಬಾ ಇದ್ದು ಇನ್ನಾದರೂ ಬಸ್ಸು ನಿಲ್ದಾಣದ ನಿರ್ಮಾಣಕ್ಕೆ ಸರಕಾರ ಕಾರ್ಯ ಪ್ರವೃತ್ತಿಸಿ ಜನರ ಬೇಡಿಕೆ ಈಡೇರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಸಚಿವರು)—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಂ ಪ್ರಯಾಣಿಕರ ಸಾರಿಗೆಯು ಪೂರ್ಣ ರಾಷ್ಟ್ರೀಕರಣವಾಗಿರುವುದಿಲ್ಲ. ಆದ್ದರಿಂದ ಖಾಸಗೀ ಮಾಲೀಕರೂ ಸಹ ಸಾರಿಗೆ ಸೌಲಭ್ಯಗಳನ್ನು ಪ್ರಯಾಣಿಕರಿಗೆ ಒದಗಿಸುತ್ತಾ ಇದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳ ತಾಲ್ಲೂಕಿನ ಬಿ. ಸಿ. ರೋಡು ಮುಖಾಂತರ ಬೇರೆ ಬೇರೆ ಸ್ಥಳಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೧೯೦ ವಾಹನಗಳನ್ನು ಅದೇ ರೀತಿ ಬೇರೆ ಬೇರೆ ಸ್ಥಳಗಳಿಂದ ಬಿ. ಸಿ. ರೋಡು ಮುಖಾಂತರ ಮುಂದಕ್ಕೆ ೧೯೦ ವಾಹನಗಳನ್ನು ಓಡಿಸುತ್ತಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಂ ಬಿ. ಸಿ. ರೋಡಿನಲ್ಲಿ ಮುನಿಸಿಪಾಲಿಟಿಯವರ ವತಿಯಿಂದ ಬಾಡಿಗೆಗೆ ಒಂದಂ ಕೊಠಡಿಯನ್ನು ಪಡೆದಿದ್ದು ಸಂಚಾರ ನಿಯಂತ್ರಣ ಕಛೇರಿಯನ್ನು ಹೊಂದಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಯಾಣಿಕರ ಸಾರಿಗೆಯು ಪೂರ್ಣ ರಾಷ್ಟ್ರೀಕರಣವಾದಾಗ ಬಿ. ಸಿ. ರೋಡಿನಲ್ಲಿ ಒಂದು ಸುಸಜ್ಜಿತ ಬಸ್ ನಿಲ್ದಾಣವು ಬೇಕಾಗಂತ್ತದೆ. ಬಸ್ ನಿಲ್ದಾಣಕ್ಕೆ ಈಗ ಜಮೀನು ಇರುವುದಿಲ್ಲ. ಸುಮಾರು ೩ ಎಕರೆ ಜಮೀನಿನ ಒಂದು ಸುಸಜ್ಜಿತವಾದ ಬಸ್ ನಿಲ್ದಾಣಕ್ಕೆ ಬೇಕಾಗುವುದು ಈ ಜಮೀನನ್ನು ಪಡೆದ ನಂತರ ಮುಂದಿನ ಆವಶ್ಯಕತೆ ಆದ್ಯತೆ ಮತ್ತು ಆರ್ಥಿಕ ಪರಿಸ್ಥಿತಿಗನುಗುಣವಾಗಿ ಬಸ್ ನಿಲ್ದಾಣವನ್ನು ಕಟ್ಟಲು ಪರಿಗಣಿಸಲಾಗುವುದು.

2) ಕುಮಾರ ಕೃಪಾ ರಸ್ತೆಯಲ್ಲಿರುವ ನೌಕರರುಗಳ ವಸತಿ ಗೃಹಗಳಿಗೆ ನೀರು ಸರಬರಾಜು ಸರಿಯಾಗಿ ಆಗದೆ ಇರುವುದರ ಬಗ್ಗೆ.—

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಕುಮಾರ ಕೃಪಾ ಎಕ್ಸ್ಟೆನ್ಷನ್ ರಸ್ತೆಯಲ್ಲಿರುವ ಸರ್ಕಾರಿ ನೌಕರರ ವಸತಿ ಗೃಹಗಳಿಗೆ ನೀರು ಸರಿಯಾದ ರೀತಿಯಲ್ಲಿ ಸರಬರಾಜು ಆಗದೆ ಇರುವ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಮನವಿ ಮಾಡಿದಾಗ ಸರ್ಕಾರದವರು ಸದರಿ ಪ್ರದೇಶದಲ್ಲಿರುವ ನೀರು ಸರಬರಾಜು ಪೈಪುಗಳನ್ನು ಬದಲಾಯಿಸುವುದಕ್ಕಾಗಿ ಸುಮಾರು ೧ ಲಕ್ಷ ೫೦ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿ ಒಂದು ವರ್ಷವಾಗಿದ್ದರೂ ಸಹ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಹಣವಿಲ್ಲವೆಂದು ನೀರು ಸರಬರಾಜು ಕೊಳವಾಯಿಗಳು, ಪೈಪುಗಳನ್ನು ಬದಲಾಯಿಸದೆ ಇರುವುದರಿಂದ ಅಲ್ಲಿನ ವಸತಿ ಗೃಹಗಳಲ್ಲಿ ವಾಸಿಸುತ್ತಿರುವ ನೌಕರರು ಹಾಗೂ ಅವರ ಕುಟುಂಬದವರು ನೀರಿಗಾಗಿ ಪರದಾಡುತ್ತಿರುವುದನ್ನು ಇಲಾಖೆಯವರ ಗಮನಕ್ಕೆ ಅನೇಕ ಬಾರಿ ತಂದರೂ ಸಹ ಯಾವುದೇ ಕ್ರಮ ಕೈಗೊಳ್ಳದೆ ಕೈಕಟ್ಟಿ ಕುಳಿತಿರುವುದಲ್ಲದೆ ಪ್ರತಿಬಾರಿಯೂ ಹಣ ಇಲ್ಲವೆಂದು ಕಂಟ್ರಾಕ್ಟರುಗಳು ಬಂದು ಕೆಲಸ ಮಾಡುವುದಿಲ್ಲವೆಂದು ತಿಳಿಸುತ್ತಿರುವುದರಿಂದ ಇದನ್ನು ಸರ್ಕಾರ ಗಮನಕ್ಕೆ ತಂದು ಕೂಡಲೇ ಈ ಬಗ್ಗೆ ಗಮನಹರಿಸಿ ಅಲ್ಲಿನ ಜನರಿಗೆ ಕುಡಿಯುವ ನೀರು ಸರಬರಾಜು ಮಾಡುವುದಕ್ಕೆ ಸಂಬಂಧಿಸಿದ ಪೈಪುಗಳನ್ನು ಬದಲಾಯಿಸಿ ನೀರು ಸರಿಯಾಗಿ ಬರುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಲೋಕೋಪಯೋಗಿ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್ —ಮಾನ್ಯ ಅಧ್ಯಕ್ಷರೇ, ಈಗಾಗಲೇ ಹಾಕಿರುವ ಪೈಪು ಕೇವಲ ಕಾಲು ಇಂಚು ವ್ಯಾಸ ಇರುವುದರಿಂದ ನೀರು ಸರಬರಾಜಾಗುತ್ತಿಲ್ಲವೆಂದು ನನ್ನ ಗಮನಕ್ಕೆ ವಿಷಯ ಬಂದಿದೆ. ಈಗ ಳ ಇಂಚು ವ್ಯಾಸದ ಕೊಳವೆ ಹಾಕುವುದಕ್ಕೆ ೧.೬ಳಿ ಲಕ್ಷ ರೂಪಾಯಿಗಳ ಬಂದು ಅಂದಾಜು ಪಟ್ಟಿಯನ್ನು ಇಲಾಖೆಯವರು ಕಳುಹಿಸಿಕೊಟ್ಟಿದ್ದಾರೆ. ಈ ವರ್ಷ ಹಣ ಬಿಡುಗಡೆ ಮಾಡಿ ಕೆಲಸ ಮಾಡಿಸುತ್ತೇವೆ.

೩) ಕಳ್ಳಂಬೆಳ್ಳ ಮತ್ತು ಹುಳಿಯಾರು ಹೋಬಳಿಯ ಲಕ್ಷ್ಮೀಸಾಗರ ಕೆರೆ ಅಚ್ಚುಕಟ್ಟಿನಲ್ಲಿ ಬಿರುಗಾಳಿಯಿಂದಾಗಿ ಉಂಟಾದ ನಷ್ಟಕ್ಕೆ ಪರಿಹಾರ ಕೊಡುವ ಬಗ್ಗೆ.—

ಶ್ರೀ ಬಿ. ಗಂಗಣ್ಣ.— ಮಾನ್ಯ ಅಧ್ಯಕ್ಷರೇ, ಕಳ್ಳಂಬೆಳ್ಳ ಹುಳಿಯೂರು ಹೋಬಳಿಯಲ್ಲಿ ಮತ್ತು ತಿರಾ ಕ್ಷೇತ್ರದ ದೊಡ್ಡಗೆರೆ ಹೋಬಳಿ ಲಕ್ಷ್ಮೀಸಾಗರ ಕೆರೆ ಅಚ್ಚುಕಟ್ಟಿನಲ್ಲಿ ೨೩ ಮತ್ತು ೨೪ಳಿ–೪೮ ರಂದು ಬೀಸಿದ ಬಿರುಗಾಳಿಯಿಂದಲೂ ರೈತರಿಗೆ ತುಂಬಲಾಗದ ನಷ್ಟ ಮತ್ತು ತೊಂದರೆ ಉಂಟಾಗಿರುವ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳ ಗಮನವನ್ನು ಸೆಳೆಯುತ್ತಾ, ಈ ಕಳಕಂಡ ಪ್ರಶ್ನೆಯನ್ನು ನೀಡ ಬಯಸುತ್ತೇನೆ.

ಹುಳಿಯೂರು ಹೋಬಳಿಯಲ್ಲಿ ಸುಮಾರು ೩,೦೦೦ಕ್ಕೂ ಹೆಚ್ಚು ಫಲ ಬಿಡುವ ಅಡಿಕೆ ಮತ್ತು ತೆಂಗಿನ ಮರಗಳು ಬಿದ್ದಿ ಹೋಗಿರುತ್ತವೆ. ಜೋಡಿ ತಿಮ್ಮಲಾಪುರ ಮತ್ತು ಸೀಗೆ ಬಾಗಿ ಕೆರೆಗಳ ಅಚ್ಚುಕಟ್ಟಿನಲ್ಲಿ ಇದ್ದ ಸುಮಾರು ೩೦೦ ಎಕರೆ ಕಟಾವಿಗೆ ಬಂದಿದ್ದ ಬತ್ತದ ಫಸಲು ಹಾಳಾಗಿರುತ್ತದೆ ಇದೇ ರೀತಿ ತಿರಾ ತಾಲ್ಲೂಕಿನ ಲಕ್ಷ್ಮೀಸಾಗರ ಕೆರೆ ಅಚ್ಚುಕಟ್ಟಿನಲ್ಲಿ ಇದ್ದ ಸುಮಾರು ೩೦೦–೪೦೦ ಎಕರೆ ಭತ್ತದ ಫಸಲು ನಷ್ಟವಾಗಿರುತ್ತದೆ. ಇದಲ್ಲದೆ ಹುಳಿಯೂರು ಹೋಬಳಿಯಲ್ಲಿ ಬಿರುಗಾಳಿಗೆ ಸಿಕ್ಕಿದ ಹೆಂಚಿನ ಮನೆಗಳು ಹೆಚ್ಚಾಗಿಯೂ ಜೋಪಡಿಯು ಬೀದಿಪಾಲಾಗಿರುತ್ತವೆ. ಈ ಎಲ್ಲಾ ಕಾರಣಗಳಿಂದ ನೊಂದಿರುವ ರೈತರುಗಳಿಗೆ ಮತ್ತು ನಿವಾಸಿಗಳಿಗೆ ಸುಮಾರು ೫೦ ಲಕ್ಷರೂಪಾಯಿಗಳವರೆಗೆ ನಷ್ಟವಾಗಿರ ಬಹುದೆಂದು ಊಹಿಸಲಾಗಿದೆ. ಈ ಸಂದರ್ಭದಲ್ಲಿ ನೊಂದಿರುವ ರೈತರಿಗೆ ತಾರತಮ್ಯವಿಲ್ಲದೆ ಮುರಿದು ಹೋದ ತೆಂಗು ಮತ್ತು ಅಡಿಕೆ ಮರಗಳ ಬದಲಿಗೆ ತೆಂಗು ಮತ್ತು ಅಡಿಕೆ ಸಸಿಗಳನ್ನು ಅಷ್ಟೇ ಪ್ರಮಾಣದಲ್ಲಿ ಸಬ್ಸಿಡಿ ಆಗಿ ಬದಲಿಸುವುದರ ಮೂಲಕ ಮತ್ತು ಭತ್ತದ ಬೆಳೆ ಕಳೆದುಕೊಂಡವರಿಗೆ ಅವರವರ ಬೇಸಾಯದ ಖರ್ಚಿನ ಮತ್ತು ಗೊಬ್ಬರಗಳಿಗೆ ಸಮಾನವಾಗಿ ಹಣದ ರೂಪದ ಪರಿಹಾರ ಮತ್ತು ಮನೆ ಹೆಂಚುಗಳನ್ನು ಕಳೆದುಕೊಂಡವರಿಗೆ ಹೆಂಚುಗಳನ್ನು ಪುಕ್ಕಟೆ ಆಗಿ ಕೊಡಿಸುವ ವ್ಯವಸ್ಥೆಗಳನ್ನು ತ್ವರಿತವಾಗಿ ಸರ್ಕಾರ ಏರ್ಪಡಿಸಬೇಕೆಂದು ಮತ್ತು ೧೯೮೭–೮೮ನೇ ಸಾಲಿನಲ್ಲಿ ತಿರಾ ತಾಲ್ಲೂಕ್ ಬೆಳ್ಳಾವಟ್ಟಣ ಹೋಬಳಿ ಕಲಾದಹಳ್ಳಿ ಮತ್ತು ಊಮಿಲಾ ದೊರೆತ ರೈತರಿಗೆ ಭಾರಿ ಮಳೆಯ ಹೆಚ್ಚು ಪ್ರವಾಹದಿಂದ ಭೂ ಕೊರೆತ ಮತ್ತು ಹಂಪುಸೆಟ್ಟುಗಳಿಗೆ ಹಾನಿ ಹಾಗೂ ಫಸಲು ನಷ್ಟಗಳಿಗೆ ಸೂಕ್ತ ಪರಿಹಾರ ದೊರಕಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ದಿನಾಂಕ ೨೩ ಮತ್ತು ೨೪–೪–೮೮ ರಂದು ತುಮಕೂರು ಜಿಲ್ಲೆಯ ಕಳ್ಳಂಬೆಳ್ಳ ಕ್ಷೇತ್ರದ ಹುಳಿಯಾರು ಹೋಬಳಿ ಹಾಗೂ ತಿರಾ ಕ್ಷೇತ್ರದಲ್ಲಿ ಆಲಿಕಲ್ಲು ಮಳೆ ಸಹಿತ ಬಿರುಗಾಳಿ ಉಂಟಾಗಿ ರೈತರ ಬೆಳೆ ನಾಶವಾಗಿರುವುದು ಸತ್ಯಾಂಶವೆ. ತಿರಾ ಹಾಗೂ ಚಿಕ್ಕನಾಯಕನ ಹಳ್ಳಿ ತಾಲ್ಲೂಕುಗಳಲ್ಲಿ ಮೇಲಿನ ಪ್ರಕೃತಿ ವಿಕೋಪದಿಂದ, ಭತ್ತ ತೆಂಗು ಇತರೆ ಬೆಳೆಗಳಿಗೆ ಹಾನಿ ಉಂಟಾಗಿದ್ದು, ಒಟ್ಟು ೧೨.೬೯ ಲಕ್ಷ ರೂಪಾಯಿಗಳ ನಷ್ಟ ಉಂಟಾಗಿರುತ್ತದೆ. ಹಾಲಿ ಇರುವ ನಿಯಮಾವಳಿಗಳಡಿಯಲ್ಲಿ ರೂ ೩,೫೦೦ ರೂಪಾಯಿಗಿಂತ ಕಡಿಮೆ ವಾರ್ಷಿಕ ವರಮಾನ ಇರುವ ಪ್ರತಿ ಕುಟುಂಬಕ್ಕೂ ಗರಿಷ್ಠ ಪರಿಹಾರ ೮೦೦ ರೂ. ಗಳು ಅವರವರ ನಷ್ಟಕ್ಕನುಸಾರವಾಗಿ ನೀಡಲು ಅವಕಾಶವಿರುತ್ತದೆ. ಈ ಪರಿಹಾರವನ್ನು ಜಿಲ್ಲಾಧಿಕಾರಿ, ಸಹಾಯ ಆಯುಕ್ತರು ಮತ್ತು ತಹಶೀಲ್ದಾರರು ತಮ್ಮ ತಮ್ಮ ಅಧಿಕಾರಿಗಳ ವ್ಯಾಪ್ತಿಗನುಗುಣವಾಗಿ ಪರಿಹಾರ ನೀಡುವ ವಿಶೇಷಾಧಿಕಾರವನ್ನು ಹೊಂದಿರುತ್ತಾರೆ. ಇದೇ ರೀತಿ ಸದರಿ ಪ್ರಕೃತಿ ವಿಕೋಪದಲ್ಲಿ ಮನೆ ಕಳೆದುಕೊಂಡವರಿಗೂ ಅಥವಾ ಮನೆಗೆ ಹಾನಿ ಉಂಟಾದ